CCE RR/PR/NSR/NSPR(B)/777/3038

B

ಮಾರ್ಚ್/ಏಪ್ರಿಲ್ 2024 ರ ಪರೀಕ್ಷೆ - 1
MARCH/APRIL 2024 EXAMINATION-1

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12]
Total No. of Printed Pages : 12]

ಒಟ್ಟು ಪ್ರಶ್ನೆಗಳ ಸಂಖ್ಯೆ : 47]
Total No. of Questions : 47]

CCE RR/PR/ NSR/NSPR
Reduced Syllabus

Question Paper Serial No.

ಇಲ್ಲಿಂದ ಕತ್ತರಿಸಿ

ಸಂಕೇತ ಸಂಖ್ಯೆ : 96-K
Code No. : 96-K

ವಿಷಯ : ಅರ್ಥಶಾಸ್ತ್ರ
Subject : ECONOMICS

(ಕನ್ನಡ ಮಾಧ್ಯಮ / Kannada Medium)

(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.
(Regular Repeater / Private Repeater / NSR / NSPR)

ದಿನಾಂಕ : 03. 04. 2024] [Date : 03. 04. 2024
ಸಮಯ : ಬೆಳಗ್ಗೆ 10-15 ರಿಂದ ಮಧ್ಯಾಹ್ನ 1-30 ರವರೆಗೆ] [Time : 10-15 A.M. to 1-30 P.M.
ಗರಿಷ್ಠ ಅಂಕಗಳು : 80] [Max. Marks : 80

03. 04. 2024

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

Cut here/ಇಲ್ಲಿ ಕತ್ತರಿಸಿ

1. ಈ ಪ್ರಶ್ನೆಪತ್ರಿಕೆಯು ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣವನ್ನು ಅನುಸರಿಸಿ), ಎಡಬದಿ ಪಾರ್ಶ್ವವನ್ನು ಕತ್ತರಿಸಬೇಡಿ.*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ (Version) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

Tear here

ECONOMICS

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :

10 × 1 = 10

1. ಹಿಂದುಳಿದ ರಾಷ್ಟ್ರಗಳ ಪ್ರಮುಖ ಲಕ್ಷಣವೆಂದರೆ

(A) ಗುಣಮಟ್ಟದ ಶಿಕ್ಷಣ

(B) ಕೈಗಾರಿಕೆಗಳಿಗೆ ಪ್ರಾಮುಖ್ಯತೆ

(C) ಮೂಲಭೂತ ಸೌಕರ್ಯಗಳ ಕೊರತೆ

(D) ರಾಷ್ಟ್ರೀಯ ಆದಾಯ ಹೆಚ್ಚಿರುತ್ತದೆ

2. ಭಾರತೀಯ ಸ್ಟೇಟ್ ಬ್ಯಾಂಕನ್ನು ರಾಷ್ಟ್ರೀಕರಣಗೊಳಿಸಿದ ವರ್ಷ

(A) 1947

(B) 1955

(C) 1960

(D) 1969

3. ಸುರೇಶ್ ತೆಂಡೂಲ್ಕರ್‌ರವರು ಬಡತನವನ್ನು ಅಳೆಯಲು ಬಳಸಿದ ಮಾನದಂಡ

(A) ತಲಾ ಆದಾಯ

(B) ಸಾಂಪ್ರದಾಯಿಕ ಸಾಗುವಳಿಯ ವಿಧಾನ

(C) ತಲಾ ಅನುಭೋಗ ವೆಚ್ಚ

(D) ಆರೋಗ್ಯಕ್ಕೆ ಮೀಸಲಿಟ್ಟ ವೆಚ್ಚ

4. ಭಾರತ ಸರ್ಕಾರವು ಮುಕ್ತವಾಯು ನೀತಿಯನ್ನು ಜಾರಿಗೊಳಿಸಿದ ವರ್ಷ

(A) 1990

(B) 1996

(C) 2001

(D) 2008

5. ಕರ್ನಾಟಕದಲ್ಲಿರುವ ರೈಲ್ವೆ ವಲಯವೆಂದರೆ

(A) ದಕ್ಷಿಣ ರೈಲ್ವೆ

(B) ಪಶ್ಚಿಮ ರೈಲ್ವೆ

(C) ಈಶಾನ್ಯ ರೈಲ್ವೆ

(D) ನೈರುತ್ಯ ರೈಲ್ವೆ

6. ನೋಟು ಚಲಾವಣೆಗೆ ಭಾರತೀಯ ರಿಸರ್ವ್ ಬ್ಯಾಂಕು ಅನುಸರಿಸುತ್ತಿರುವ ಪದ್ಧತಿ

(A) ಅಧಿಕ ಮೀಸಲು ಪದ್ಧತಿ

(B) ಕನಿಷ್ಠ ಮೀಸಲು ಪದ್ಧತಿ

(C) ರೆಪೊ ದರ ನೀತಿ

(D) ಟ್ರಾಯ್ (TRAI) ನೀತಿ

7. ಹೆಚ್ಚು ತಲಾ ಆದಾಯ ಹೊಂದಿರುವ ದೇಶವೆಂದರೆ

(A) ಭಾರತ

(B) ಚೀನಾ

(C) ಈಜಿಪ್ಟ್

(D) ಅಮೆರಿಕಾ

8. "ಕೈಗಾರೀಕರಣಗೊಳಿಸಿ ಇಲ್ಲವೇ ವಿನಾಶವಾಗಿ" ಎಂದು ಹೇಳಿದವರು

(A) ನೆಹರು

(B) ಗಾಂಧೀಜಿ

(C) ಸರ್. ಎಂ. ವಿಶ್ವೇಶ್ವರಯ್ಯ

(D) ಅಂಬೇಡ್ಕರ್

9. 2013 ರ ಮಾರ್ಚ್ 31 ರ ವೇಳೆಗೆ ಭಾರತದಲ್ಲಿ ಇದ್ದ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ (RRB's) ಸಂಖ್ಯೆ

(A) 50

(B) 64

(C) 75

(D) 91

10. ಭಾರತ್ ನಿರ್ಮಾಣ್ ಯೋಜನೆ ಪ್ರಾರಂಭವಾದ ವರ್ಷ

(A) 2005

(B) 2006

(C) 2008

(D) 2009

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

***A*-ಪಟ್ಟಿ**	***B*-ಪಟ್ಟಿ**
(A) ಭಾರತದಲ್ಲಿ ಬಂದರು ಅಭಿವೃದ್ಧಿ ಇಲಾಖೆ	(i) 1831
(B) ಭಾರತದಲ್ಲಿ ದೂರವಾಣಿ ಸೌಲಭ್ಯ	(ii) 1943
(C) ಭಾರತದಲ್ಲಿ ವೇಗದ ಅಂಚೆ	(iii) 1957
(D) ನಾಗಪುರ ಯೋಜನೆ	(iv) 1972
(E) ಅಂಚೆ ಸೂಚಿ ಸಂಖ್ಯೆ	(v) 1986
	(vi) 1999
	(vii) 2001

III. **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಒಂದು ರಾಷ್ಟ್ರವು ಬಡ ರಾಷ್ಟ್ರವಾಗಿರುವುದಕ್ಕೆ ಕಾರಣ ಬಡತನವಾಗಿದೆ ಎಂದು ಹೇಳಿದವರು ಯಾರು ?

13. ಬಡತನವನ್ನು ವಿಶ್ಲೇಷಿಸಿ.

14. ವಿಶ್ವದಲ್ಲಿಯೇ ಎರಡನೆಯ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ದೇಶ ಯಾವುದು ?

15. ಭಾರತದಲ್ಲಿ ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು ಯಾವುದು ?

16. ಭಾರತದಲ್ಲಿ ನೆಹರು ರೋಜ್‌ಗಾರ್ ಯೋಜನೆಯನ್ನು ಏಕೆ ಜಾರಿಗೊಳಿಸಲಾಗಿದೆ ?

17. ಬ್ರಿಟಿಷರು ರೈಲು ಸಾರಿಗೆಯನ್ನು ಏಕೆ ಅಭಿವೃದ್ಧಿಪಡಿಸಿದರು ?

18. ವ್ಯಾಪಾರ ಎಂದರೇನು ?

19. ವಿದೇಶಿ ವಿನಿಮಯ ಎಂದರೇನು ?

20. ಪ್ರಗತಿಯ ಯಂತ್ರ ಎಂದು ಯಾವುದು ಪರಿಗಣಿಸಲ್ಪಟ್ಟಿದೆ ?

21. ಹೆಚ್.ಡಿ.ಐ. ಯನ್ನು ವಿಶ್ಲೇಷಿಸಿ.

22. ಕೃಷಿ ಹಣಕಾಸು ಎಂದರೇನು ?

23. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಕ್ಕೆ ಒಂದು ಉದಾಹರಣೆ ಕೊಡಿ.

24. ಸಾರಿಗೆ ಎಂದರೇನು ?

25. ಇ-ಮೇಲ್ ಎಂದರೇನು ?

26. ಭಾರತದಲ್ಲಿ ಶೀಘ್ರ ಅಂಚೆ ಸೇವೆಯನ್ನು ಯಾವಾಗ ಆರಂಭಿಸಲಾಯಿತು ?

IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :

14 × 2 = 28

27. ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹಾಗೂ ಅನಭಿವೃದ್ಧಿ ಹೊಂದಿದ ರಾಷ್ಟ್ರಗಳ ನಡುವೆ ವ್ಯತ್ಯಾಸವಿದೆ. ಸಮರ್ಥಿಸಿ.

28. ಅನಭಿವೃದ್ಧಿ ಆರ್ಥಿಕತೆಯ ಆರ್ಥಿಕೇತರ ಲಕ್ಷಣಗಳನ್ನು ವಿವರಿಸಿ.

29. ಭಾರತದಲ್ಲಿ ಕೃಷಿ ಹಣಕಾಸನ್ನು ಒದಗಿಸುವ ಪ್ರಮುಖ ಮೂಲಗಳನ್ನು ವಿವರಿಸಿ.

30. ಭಾರತದಲ್ಲಿ ಕೈಗಾರಿಕಾಭಿವೃದ್ಧಿಯ ಅವಶ್ಯಕ. ಏಕೆ ?

31. ಜಿಲ್ಲಾ ಕೈಗಾರಿಕಾ ಕೇಂದ್ರದ ಎರಡು ಕಾರ್ಯಗಳನ್ನು ತಿಳಿಸಿ.

32. ಬಡತನದ ವಿಧಗಳನ್ನು ವಿವರಿಸಿ.

33. ಭಾರತದಲ್ಲಿ ಜಲಸಾರಿಗೆಯನ್ನು ಹೇಗೆ ವಿಂಗಡಿಸಲಾಗಿದೆ ?

34. ವಾಯು ಸಾರಿಗೆಯ ಉಪಯೋಗಗಳು ಯಾವುವು ?

35. ಭಾರತೀಯ ರಿಸರ್ವ್ ಬ್ಯಾಂಕುಗಳ ಪ್ರಾದೇಶಿಕ ಕಛೇರಿಗಳನ್ನು ಪಟ್ಟಿ ಮಾಡಿ.

36. ಹಣಕಾಸು ಮೇಲ್ವಿಚಾರಣೆ ಮಂಡಳಿಯ ಪ್ರಮುಖ ಕಾರ್ಯಗಳನ್ನು ವಿವರಿಸಿ.

37. ಭಾರತೀಯ ರಿಸರ್ವ್ ಬ್ಯಾಂಕ್ ವಿದೇಶಿ ವಿನಿಮಯವನ್ನು ನಿಯಂತ್ರಿಸುತ್ತದೆ. ಹೇಗೆ ?

38. ಫೆಮಾ (FEMA) ನ ಮುಖ್ಯ ಉದ್ದೇಶಗಳನ್ನು ವಿವರಿಸಿ.

39. ಬಡತನ ರೇಖೆಯನ್ನು ವ್ಯಾಖ್ಯಾನಿಸಿ.

40. ಭಾರತದ ರೈಲು ಮಾರ್ಗಗಳ ಯಾವುದಾದರೂ ಎರಡು ವಿಧಗಳನ್ನು ತಿಳಿಸಿ.

V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :

6 × 3 = 18

41. ಭಾರತದಲ್ಲಿ ಕೃಷಿ ಹಣಕಾಸಿನ ಅಗತ್ಯತೆಯನ್ನು ವಿವರಿಸಿ.

42. ಭಾರತದಲ್ಲಿ ಬಡತನವನ್ನು ಹೋಗಲಾಡಿಸಲು ಸರ್ಕಾರಗಳು ಹಮ್ಮಿಕೊಂಡ ಪ್ರಮುಖ ಕಾರ್ಯಕ್ರಮಗಳನ್ನು ತಿಳಿಸಿ.

43. ಆಂತರಿಕ ಮತ್ತು ವಿದೇಶ ವ್ಯಾಪಾರದ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

44. ಗ್ರಾಮೀಣ ಭಾಗದಲ್ಲಿ ಲೇವಾದೇವಿಗರ ಪಾತ್ರವನ್ನು ವಿವರಿಸಿ.

45. ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕ ವ್ಯವಸ್ಥೆಯ ಪಾತ್ರ ಪ್ರಾಮುಖ್ಯವಾಗಿದೆ. ಸಮರ್ಥಿಸಿ.

46. ಭಾರತದಲ್ಲಿ ಬಡತನಕ್ಕೆ ಕಾರಣಗಳು ಯಾವುವು ?

VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : **1 × 4 = 4**

47. ಸಣ್ಣ ಪ್ರಮಾಣದ ಕೈಗಾರಿಕೆಗಳ ಮಹತ್ವ ತಿಳಿಸಿ.

DO NOT WRITE ANYTHING HERE